# ಒ,ಓ , ಅಕ್ಷರದ,ವಚನದ ಅರ್ಥ

1) ಒಲೆಯ ಹೊಕ್ಕು ಉರಿಯ ಮರೆದವಳ
ಮಲೆಯ ಹೊಕ್ಕು ಉಲುಹ ಮರೆದವಳ,
ಸಂಸಾರ ಸಂಬಂಧವ ನೋಡಾ. ಭವಭವದಲ್ಲಿ
ಎನ್ನ ಬೆನ್ನ ಬಿಡದು. ಸರವು ನಿಸ್ಸರವು ಒಂದಾದವಳ
ಎನ್ನಲೇನ ನೋಡುವಿರಿ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ
ಮಲೆ- ಬೆಟ್ಟ,,
ಉಲುಹು-ಮಾತು, ಸುಳುಹು,
ಭವಭವ-ಜನ್ಮಜನ್ಮ,
ನಿಸ್ಸರ-ಅರ್ಥವಿಲ್ಲದ್ದು

ವಚನದ ಅರ್ಥ

ಇದು ನಿರಾಶೆ, ನಿಶ್ಚಿಂತೆ, ನಿರಾಳದ ವಚನ. ಉಡುತಡಿ, ಅರಮನೆ, ರಾಜ, ತಂದೆ ತಾಯಿ, ಗುರು, ಬಂಧು, ಬಾಂಧವರ ಸಂಬಂಧ ಕಡಿದು ಕೊಂಡಾಯಿತು.ಈಗ ಕಾಡಾರಣ್ಯ ಶ್ರೀ ಶೈಲ ದಲ್ಲಿ ತಪಸ್ಸಿನಲ್ಲಿದ್ದಾರೆ.
ಮಹಾನ್ ಶರಣರ,ಆಧ್ಯಾತ್ಮಜೀವಿಗಳು ನೆರವಿಗಿದ್ದಾರೆ.ನನ್ನ ಜೀವನದಲ್ಲಿ ಊಹಿಸಲೂ ಆಗದ ಆಘಟಿತ ಘಟನೆಗಳು ನಡೆದು ಹೋಡವು. ಏನೆಲ್ಲ ಆಗಿ ಹೋಯಿ ತಲ್ಲ.ವಿಷಾದ ಮನಸ್ಸನ್ನು ಆವರಿಸಿದೆ. ಪರಮಾತ್ಮನೇ ನಿನ್ನನ್ನು ನಂಬಿ ಬಂದಿದ್ದೇನೆ. ಈ ನಿರ್ಭಾಗ್ಯ ಹೆಣ್ಣುಮಗಳು ಅನಾಥಳು.ನೀನೆ ನನಗೆ ದಿಕ್ಕು ನಿನ್ನ ಅನುಗ್ರಹಕ್ಕಾಗಿ ಏನೆಲ್ಲ ಅನುಭವಿಸಿ ಬಂದಿದ್ದೇನೆ .ಮತ್ತೆ ನನ್ನನ್ನು ಇನ್ನು ಹೆಚ್ಚು ಕಾಡಬೇಡ ತಂದೆ.. ನಿಶ್ಚಿಂತೆಯಿಂದ ನಿರಾಳವಾಗಿ ಉಪಾಸನೆಗೆ ತೊಡಗಿದ್ದಾರೆ.

ಒಲೆಯ ಹೊಕ್ಕು ಉರಿಯ ಮರೆದವಳ. ಒಲೆಯೆಂದರೆ ಧಗಧಗ ಉರಿವ ಬೆಂಕಿ . ಆ ಒಲೆಯೊಳಗಿದ್ದೂ ಉರಿಯ ಬೇಗೆಯನ್ನು ಮರೆತು ಬದುಕಿದ್ದಾರೆ. ಜೀವನ ಎಷ್ಟೊಂದು ದಾರುಣ ಇರಬೇಕು. ಈ ರೂಪಕ ತುಂಬ ಸಮರ್ಥ ಚಿತ್ರಣ ಕೊಡುತದೆ. ಬದುಕಿನಲ್ಲಿ ದುರ್ಘಟನೆ ನಡೆದಾಗ, ಜೀವನದಲ್ಲಿ ನೆಮ್ಮದಿ ಇದ್ದಾಗ ಅನನ್ಯ ಶರಣಾಗತಿಯ ಭಕ್ತಿ ಮಾಡಿದ್ದೇನೆ, ಪರಮಾತ್ಮನೇ ಈಗ ಲೋಕಾಪವಾದದ ಪ್ರವಾಹಕ್ಕೆ ಸಿಕ್ಕಿದ್ದೇನೆ. ನೀನು ಇನ್ನೂ ಎಷ್ಟು ಪರೀಕ್ಷೆ ಮಾಡುವವನು. ಒಲೆಯ ಉರಿ, ಜನಾಪವಾದದ ಒಲೆಗೆ ಅಕ್ಕಮಹಾದೇವಿಯವರು ಬಿದ್ದಿದ್ದಾರೆ. ಆ ಉರಿ ಎಷ್ಟು ಉರಿಸಿದರೂ ಅದನ್ನು ನುಂಗಿ ಸಹಿಸಿದ್ದಾರೆ. ಎಲ್ಲಿ ನೋಡಿದರೂ ಅಕ್ಕಮಹಾದೇವಿಯವರದೇ ಸುದ್ದಿ.. ಜನ ಜಾತ್ರೆಯಂತೆ ಬರುತ್ತಿದೆ.. ರಾಜನ ಮುಷ್ಟಿಯಿಂದ ಪಾರಾಗಿ ಬಂದುದಾಯಿತು .ಅಯ್ಯೋ ಹೀಗಾಯಿತಲ್ಲ. ಇಂತಹ ಭಕ್ತರನ್ನೂ ಹೀಗೆ ಕಾಡ ಬಹುದೆ?ಈಗ ಸಾಂತ್ವನದ ಮಾತುಗಳಿಂದ ಏನೂ ಪ್ರಯೋಜನವಿಲ್ಲ. ಮಲೆಯ ಹೊಕ್ಕು ಉಲುಹ ಮರೆದವಳ. ಶ್ರೀ ಶೈಲ ಬೆಟ್ಟ ಸೇರಿದ್ದಾರೆ. ಈಗ ಮಾತು ಬೇಡವಾಗಿದೆ. ಮೌನ ತಪಸ್ಸು, ಅನುಭಾವ, ಶಾಂತಿ ಬೇಕು.ಗಿಡ,ಮರಗಳೂ ಉಲುಹನ್ನು ಮರೆತು ನಿರುಮ್ಮಳ ಇರುತ್ತವೆ ಹಾಗೆ ನಾನೂ ನಿರುಮ್ಮಳ ಇದ್ದು ಬಿಡುತ್ತೇನೆ. ದೇವರು ಬೇಕು ಎಂದು ಈ ಜೀವನಕ್ಕೆ ಬಂದೆ. ಏನೆಲ್ಲ ಕಂಡೆ. ಇನ್ನು

ಕಾಡಾಗುತ್ತೇನೆ.ಗಿಡವಾಗುತ್ತೇನೆ. ಬೆಟ್ಟವಾಗುತ್ತೇನೆ. ಸಂಸಾರ ಸಂಬಂಧವ ನೋಡಾ. ಸಂಸಾರ ಏನೆಲ್ಲ ಅನಾಹುತ ಮಾಡಿತು. ಜನ್ಮ ಜನ್ಮದಲ್ಲಿ ಹುಡುಕಿಬರುತ್ತಿದೆ. ತಿಳಿದು ನೋಡಿದರೆ ಈ ಸಂಸಾರ ನಿಸ್ಸಾರವಾದದ್ದು. ಸರವು ನಿಸ್ಸರವು ಒಂದಾದವಳ ಮಾತುಮೌನ ಮೀರಿ ಕಡುಧ್ಯಾನದ ಲ್ಲಿದ್ದಾರೆ. ಎನ್ನಲೇನ ನೋಡುವಿರಿ.ವಿಷಣ್ಣಭಾವದಲ್ಲಿದ್ದಾರೆ. ಶಿವ ಶಿವಾ ಎಷ್ಟು ಪರೀಕ್ಷೆ.

2) ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
ಎಂಬತ್ತನಾಲ್ಕು ಲಕ್ಷ ಯೋನಿಯೊಳಗೆ ಬಂದೆ ಬಂದೆ
ಬಾರದ ಭವಂಗಳಲಿ ಬಂದೆ ಬಂದೆ
ಉಂಡೆ ಉಂಡೆ ಸುಖಾಸುಖಂಗಳ ,
ಹಿಂದಣ ಜನ್ಮ ತಾನೇನಾದಡೆಯೂ ಆಗಲಿ
ಮುಂದೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನ.

ನಾನು 84 ಲಕ್ಷ ಜನ್ಮಗಳಲ್ಲಿ ಬಂದಿದ್ದೇನೆ. ಬರಬಾರದ ಜನ್ಮಗಳಲ್ಲೆಲ್ಲ ಬಂದಿದ್ದೇನೆ. ಒಳ್ಳೆಯದು ಕೆಟ್ಟದು ಕಂಡಿದ್ದೇನೆ. ಹಿಂದಿನ ಜನ್ಮಗಳು ಏನಾದರೂ ಆಗಿರಲಿ ಚೆನ್ನಮಲ್ಲಿಕಾರ್ಜುನ ಪರಮಾತ್ಮನೆ ನೀನು ಮುಂದೆ ಅನುಗ್ರಹಿಸು, ಈಜಗತ್ತಿನಲ್ಲಿ 84 ಲಕ್ಷ ಜೀವರಾಶಿಗಳಿವೆ ಎಂದು ಪುರಾಣಗಳು ಹೇಳುತ್ತವೆ. ಈ ಎಲ್ಲ ಜನ್ಮಗಳಲ್ಲಿಯೂ ಮನುಷ್ಯ ಹಾದು ಬಂದಿರಬಹುದು.ನಾನಂತೂ ಅನೇಕ ಜನ್ಮಗಳಲ್ಲಿ ಬಂದಿದ್ದೇನೆ ಒಂದಲ್ಲ ಎರಡಲ್ಲ 84 ಲಕ್ಷ ಜನ್ಮಗಳಲ್ಲಿ ಬರಬಾರದ ಜನ್ಮಗಳಲ್ಲಿ ಬಂದಿದ್ದೇನೆ. ಒಳ್ಳೆಯದು ಕೆಟ್ಟದ್ದನ್ನೆಲ್ಲ ಸುಖದುಃಖಗಳನ್ನೆಲ್ಲ ಅನುಭವಿಸಿದ್ದೇನೆ.ಹಿಂದಿನ ಜನ್ಮಗಳು ಏನಾದರೂ ಆಗಿರಲಿ. ಹಿಂದಿನದನ್ನು ತೆಗೆದುಕೊಂಡು ಈಗ ಮಾಡ ಬೇಕೇನು?' ನಿನ್ನಲ್ಲಿ ಪ್ರಾರ್ಥಿಸುತ್ತಿದ್ದೇನೆ ಅನುಗ್ರಹಿಸು. ಎಷ್ಟೆಲ್ಲ ಪ್ರಾರ್ಥನೆ ಮಾಡಿ ದ್ದಾರೆ. ಈ ಪ್ರಾರ್ಥನೆಗೆ ಬಂಡೆಯ ಕಲ್ಲು ಕೂಡ ಕರಗಬಹುದು ಅಷ್ಟು ಪ್ರಾರ್ಥನೆ ಮಾಡಿದ್ದಾರೆ ಮಹಾದೇವಿಯಕ್ಕನವರು.

3).ಒಳಗೆ ಶೋಧಿಸಿ ಹೊರಗೆ ಶುದ್ಧವಿಸಿ
ಒಳಹೊರಗೆಂಬ ಶಂಕೆಯ ಕಳೆದು,
ಸ್ಫಟಿಕದ ಶಲಾಕೆಯಂತೆ ತಳವೆಳಗು ಮಾಡಿ
ಸುಕ್ಷೇತ್ರನರಿದು ಬೀಜವ ಬಿತ್ತುವಂತೆ
ಶಿಷ್ಯನ ಸರ್ವಪ್ರಪಂಚು ನಿವೃತ್ತಿಯಮಾಡಿ ನಿಜೋಪದೇಶವನಿತ್ತು
ಆ ಶಿಷ್ಯನ ನಿಜದಾದಿಯನ್ನೈದಿಸುವನೀಗ
ಜ್ಞಾನಗುರು . ಆ ಸಹಜ ಗುರುವೀಗ ಜಗದಾರಾಧ್ಯರು.
ಅವರ ಶ್ರೀಪಾದಕ್ಕೆ ನಮೋನಮೋ ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ಶಂಕೆ- ಅನುಮಾನ,
ಉಭಯ- ದ್ವಂದ್ವ,
ಶಲಾಕೆ-ಹೊಳಪು ಪ್ರಕಾಶ,
ತಳವೆಳಗು- ಪ್ರಜ್ವಲಿಸುವಂತೆ, ಬದಲಾಯಿಸು,
ಸುಕ್ಷೇತ್ರ- ಯೋಗ್ಯ,ಶ್ರೇಷ್ಠ,

ಸರ್ವಪ್ರಪಂಚು- ಲೌಕಿಕ ಸಂಬಂಧ
ನಿವೃತ್ತಿ-ನಿರಸನ,
ನಿಜೋಪದೇಶ- ಜ್ಞಾನೋಪದೇಶ, ದರ್ಶನ, ಆದಿ-ಮೂಲ,
ಜ್ಞಾನಗುರು-ಸತ್ಯ ದರ್ಶನ ಮಾಡಿಸುವವರು,
ಆರಾಧ್ಯ- ವಂದನೀಯ.

ವಚನದ ಅರ್ಥ

ಜ್ಞಾನಗುರು ಯಾರು? ಶಿಷ್ಯರಿಗೆ ಏನು ಉಪದೇಶ ಮಾಡುತ್ತಾರೆ.ಎಂಬ ವಿಚಾರವನ್ನು ತಿಳಿಸಲಾಗಿದೆ. ಒಳಗೆ ಶೋಧಿಸಿ ಹೊರಗೆ ಶುದ್ಧವಿಸಿ ಒಳಹೊರಗೆಂಬ ಉಭಯ ಶಂಕೆಯ ಕಳೆದು ಶಿಷ್ಯನು ದೀಕ್ಷೆಗೆ ಆರ್ಹನೊ? ಇಲ್ಲವೊ? ಒರೆಹಚ್ಚಿ ನೋಡುತ್ತಾರೆ. ರೈತ ಬೆಳೆ ತೆಗೆಯಲು ಭೂಮಿ ಯೋಗ್ಯವೆ? ಅಲ್ಲವೆ? ಮಣ್ಣು ಪರೀಕ್ಷೆ ಮಾಡುತಾನೆ. ಬಿತ್ತನೆಗೆ ಮಣ್ಣು ಸೂಕ್ತವೆ? ಭೂಮಿ ಹಸನು ಮಾಡಲಾಗಿದೆಯೆ? ಎಲ್ಲ ಹಸನುಗೊಳಿಸಿ ನಂತರ ಬಿತ್ತನೆ ಮಾಡಲಾಗುತ್ತದೆ. ಅದೇ ರೀತಿ ಶಿಷ್ಯನಿಗೆ ದೇವರ ಹಂಬಲ ಇದೆಯೆ? ಅನುಭಾವಕ್ಕೆ ಯೋಗ್ಯತೆ ಇದೆಯೆ ?ಪರೀಕ್ಷೆ ಮಾಡಲಾಗುತ್ತದೆ. ಪೂಜೆಯಲ್ಲಿ ಭಕ್ತಿ ಪ್ರೀತಿ, ಶ್ರದ್ದೆಜ್ಞಾನದ ಹಂಬಲ ನೋಡಿದ ನಂತರ ಗುರುಗಳು ದೀಕ್ಷೆ ಕೊಡುತ್ತಾರೆ. ಸದಾಚಾರ, ಸನ್ನಡತೆ, ಸದ್ಗುಣ ಇವುಗಳನ್ನು ಅಳವಡಿಸಿಕೊಳ್ಳಲು ತಿಳಿವಳಿಕೆ ಕೊಡುತ್ತಾರೆ. ಸ್ಪಟಿಕದ ಶಲಾಕೆಯಂತೆ ತಳವೆಳಗು ಮಾಡಿ ಸ್ಪಟಿಕ ತನ್ನ ಒಳಗನ್ನೆಲ್ಲ ತೋರಿಕೊಳ್ಳುತ್ತದೆ.ಹಾಗೆ ಶಿಷ್ಯನ ಅಂತರಂಗ, ಬಹಿರಂಗಗಳು ಅನಾವರಣಗೊಳ್ಳುತ್ತವೆ. ಆಗ ಶಿಷ್ಯನ ಅಂತರಂಗ ಪರಮಾತ್ಮ ಮಂತ್ರ ಬಿತ್ತನೆಗೆ ಯೋಗ್ಯವಾಗುತ್ತದೆ. ಜ್ಞಾನೋಪದೇಶ ನಡೆಯುತ್ತದೆ. ಗುರು -ರೈತ,  ಶಿಷ್ಯ ಭೂಮಿ. ಶಿಷ್ಯನ ಸರ್ವ ಪ್ರಪಂಚವ ನಿವೃತ್ತಿಯಮಾಡಿ,- ಶಿಷ್ಯನು ಅನುಭಾವ ಮಾರ್ಗಕ್ಕೆ ಬಂದರೂ ಅವನಲ್ಲಿ ವೈರಾಗ್ಯ ಇದ್ದರೂ, ವಾಸನಾರೂಪದಲ್ಲಿ ಲೌಕಿಕ ಸಂಬಂಧಗಳು ಇರುತ್ತವೆ. ಆ ವಾಸನಾ ಸಂಬಂಧಗಳು ಜ್ಞಾನಮಾರ್ಗಕ್ಕೆ ಅಡ್ಡಿ ಇರುವುದರಿಂದ ಅಂತಹ ಸಂಬಂಧ ಶಿಷ್ಯನ ಅಂತರಂಗದಿಂದ ದೂರ ಮಾಡುತ್ತಾನೆ. ನೆನಪುಗಳು, ಸಂಬಂಧಗಳು ಜ್ಞಾನಮಾರ್ಗಕ್ಕೆ ಅಡ್ಡಿಯಾಗುತ್ತವೆ ಇವುಗಳನ್ನು ದೂರ ಮಾಡುವುದು ತುಂಬ ಅಗತ್ಯವಿದೆ. ಅಲ್ಲದೆ ಇಂದ್ರಿಯಗಳಿಗೆ ಅರಿಷಡ್ವರ್ಗಗಳಿಗೆ ಕಾಮಾದಿ ರಾಗಭಾವಗಳು ತುಂಬ ಬಲವಾಗಿ ಕಾಡುತ್ತವೆ. ದೇಹ, ಇಂದ್ರಿಯ, ಮನಸ್ಸು, ಪ್ರಾಣ, ಇವು ಯಾಕೆ ಬಂದವು? ಈಜನ್ಮಗಳು ಯಾಕೆ?ಈದು:ಖಗಳು ಎಲ್ಲಿಯವರೆಗೆ?ಈಎಲ್ಲವನ್ನು ದೂರ ಮಾಡಿಕೊಳ್ಳುವ ದಾರಿಯನ್ನು ಗುರುಗಳು ತೋರಿ
ಕೊಡುತ್ತಾರೆ. ಅವರೆ ಜ್ಞಾನಗುರುಗಳು.

ಶರಣುಶರಣಾರ್ಥಿಗಳು.
4)ಒಪ್ಪುವ ಶ್ರೀವಿಭೂತಿಯನೊಸಲಲ್ಲಿ ಧರಿಸಿದ್ಲೃಷ್ಟಿ ಯಾರೆ ನಿಮ್ಮನೋಡಲೊಡನೆ ಬೆಟ್ಟದಷ್ಟು ತಪ್ಪುಳ್ಳಡೆಯೂ ನಿಮ್ಮ ಮುಟ್ಟಲಮ್ಮವು ನೋಡಾ.
ದುರಿತ ಅನ್ಯಾಯವ ಪರಿಹರಿಸಬಲ್ಲಡೆ ಓಂನಮ:ಶಿವಾಯ ಶರಣೆಂಬುದೆ ಮಂತ್ರ.
ನಮ:ಶಿವಾಯ ಇತಿಮಂತ್ರಂಯಃಕರೋತಿ ತ್ರಿಪುಂಡ್ರಕಂ
ಸಪ್ತಜನ್ಮಕೃತಂ ಪಾಪಂ ತತ್ ಕ್ಷಣಾದ್ ಏವ ನಶ್ಯತಿ .ಎಂದುದಾಗಿ
ಸಿಂಹದಮರಿಯ ಸೀಳ್ನಾಯಿ ತಿಂಬಡೆ ಭಂಗವಿನ್ನಾರದು ಚೆನ್ನಮಲ್ಲಿಕಾರ್ಜುನ

ಪದಗಳ ಅರ್ಥ

ನೊಸಲು-ಹಣೆ,
ದೃಷ್ಟಿಯಾರೆ- ಕಣ್ಣುತುಂಬಿ ನೋಡಿ,
ದುರಿತ-ಪಾಪಕರ್ಮ, ಕೆಡುಕು, ಅನ್ಯಾಯ-ಅನೀತಿ
ಕೃತ-ಮಾಡಿದ್ದು.
ಸಪ್ತ-ಏಳು,ಕರೋತಿ ಧರಿಸು,
ತ್ರಿಪುಂಡ್ರ-ಮೂರಳೆ ವಿಭೂತಿ,
ತತ್-ಆ ಕ್ಷಣ, ಕೂಡಲೆ,
ಏವಂ-ಎಲ್ಲ
ನಶ್ಯತಿ-ನಾಶ ವಾಗುವುದು.
ಭಂಗ-ಕಷ್ಟ

ವಚನದ ಅರ್ಥ

ಒಪ್ಪುವ ಶ್ರೀವಿಭೂತಿಯ ನೊಸಲಲ್ಲಿ ಧರಿಸಿ ದೃಷ್ಟಿಯಾರೆ ನಿಮ್ಮನೊಲೊಡನೆ ಬೆಟ್ಟದಷ್ಟು ತಪ್ಪುಳ್ಳಡೆಯೂ ನಿಮ್ಮ ಮುಟ್ಟಲಮ್ಮವು ನೋಡಾ. ಶ್ರೇಷ್ಠವಾದ ವಿಭೂತಿಯನ್ನು ಹಣೆಯಲ್ಲಿ ಧರಿಸಿ ಇಷ್ಟಲಿಂಗದ ದರ್ಶನ ಪಡೆದರೆ,ಬೆಟ್ಟದಷ್ಟು ತಪ್ಪುಗ ಳಿದ್ದರೂ ಅವು ನಮ್ಮನ್ನು ಮುಟ್ಟುವುದಿಲ್ಲ. ದುರಿತ ಅನ್ಯಾಯವ ಪರಹರಿಸಬಲ್ಲಡೆ ಓಂನಮಃಶಿವಾಯ ಶರಣೆಂಬುದೆ ಮಂತ್ರ.ಪಾಪ, ಅನ್ಯಾಯಗಳನ್ನು
ನಾಶಮಾಡ ಬೇಕಾದರೆ ಓಂ ನಮಃಶಿವಾಯ ಎಂಬ ಮಂತ್ರವನ್ನು ಜಪಿಸಬೇಕು.ವೀರಶೈವ ಲಿಂಗಾಯತ ಧರ್ಮದಲ್ಲಿ ವಿಭೂತಿಯು ಅಷ್ಟಾವರಣಗಳಲ್ಲಿ ಒಂದು. ಇಲ್ಲಿ ವಿಭೂತಿಯ ಮಹಿಮೆ ಹೇಳಿದ್ದಾರೆ. ಧರ್ಮದಲ್ಲಿ ಸಾಂಪ್ರದಾಯಿಕ ಆಚಾರಗಳು ಇರುತ್ತವೆ. ಅವು ಬೆಳೆದು ಬರಲು ಆ ಕಾಲದ ನಂಬಿಕೆಗಳು ಕಾರಣವಾಗಿರುತ್ತವೆ. ಶಿವನು ಧರ್ಮದ ದೇವರಾಗಿ ಆರಾಧನೆಗೊಂಡ ಕಾಲಕ್ಕೆ ಶಿವನು ಧರಿಸುವ ಎಲ್ಲ ವಸ್ತುಗಳು ಕೂಡ ಪೂಜ್ಯವಾದವು.
ದೇವರು ನಿರಾಕಾರನು ಪರಬ್ರಹ್ಮನು ಎಂದು ಮುಂದೆ ಅನುಭವಗೋಚರವಾದರೂ ವಿಭೂತಿಯನ್ನು ಲಾಂಛನವಾಗಿಯೂ ಅಷ್ಟಾವರಣಗಳಲ್ಲಿ ಒಂದಾಗಿಯೂ ಉಳಿಸಿಕೊಂಡು ಬರಲಾಯಿತು. ಇಲ್ಲಿ ಅಕ್ಕಮಹಾದೇವಿಯವರು ವಿಭೂತಿಯ ಶ್ರೇಷ್ಠತೆಯನ್ನು ಕೊಂಡಾಡಿದ್ದಾರೆ. ಜನರು ಬಹಿರಂಗದಲ್ಲಿ ಲಾಂಛನ ಧರಿಸುವುದು ತುಂಬ ಮುಖ್ಯ. ದುಷ್ಟಕಾರಗಳಲ್ಲಿ ಪ್ರವೃತ್ತನಾಗುವ ಮನುಷ್ಯನಿಗೆ ಸ್ವೇಚ್ಛೆಯಿಂದ ನಡೆಯದಂತೆ ಕಡಿವಾಣ ಹಾಕುತ್ತವೆ. ಬಹಿರಂಗದಲ್ಲಿ ಸದಾಚಾರ ಅಂತಂಗದಲ್ಲಿ ಪರಿಶುದ್ಧತೆ ಬೇಕು.ಇದು ಒಳ್ಳೆಯ ಸಮಾಜ ನಿರ್ಮಾಣಕ್ಕೆ ಕಾರಣ ಆಗುತ್ತದೆ. ಎನ್ನುವ ಆಶಯ ಈ ಲಾಂಛನಗಳ ಆವಿಷ್ಕಾರಕ್ಕೆ ಕಾರಣವಾಗಿದೆ. ಹಿಂದೆ ಈರೀತಿ ಪರಿಶುದ್ಧರಾದವರ ಇತಿಹಾಸ, ಭಕ್ತಿ ಪರಂಪರೆ ಇದೆ.

ಓಂನಮಃಶಿವಾಯ ಮಂತ್ರವ ಜಪಿಸುತ್ತ ಹಣೆಯಮೇಲೆ ಭಸ್ಮಧಾರಣೆ ಮಾಡಿ ಕೊಂಡರೆ ಏಳೇಳು ಜನ್ಮಗಳ ಪಾಪವೆಲ್ಲವೂ ಹೋಗುತ್ತದೆ. ಅಂದರೆ ಧರ್ಮಎಂತಹ ಪಾಪಿಗೂ ಬದುಕುವ ಅವಕಾಶ ಕೊಟ್ಟಿದೆ. ನಾವು ಮಾಡುವ ಎಲ್ಲ ಪಾಪಗಳಿಗೂ ನಾವೆ ಕಾರಣರು. ಈಪಾಪಕರ್ಮಗಳನ್ನು ಮಾಡುವುದು ಅಜ್ಞಾನದಿಂದ ಅಥವಾ ದೇಹದಾಶೆಯಿಂದ . ಈಎರಡನ್ನೂ ಮಾಡಿಸುವುದು ಪ್ರಲೋಬನೆಗೊಳಗಾಗುವ ಮನಸ್ಸು. ಇಂತಹ ಮನಸ್ಸನ್ನು ನಿಗ್ರಹಿಸಲು ಧರ್ಮವು ಕೆಲವು ಮನಶ್ಯಾಸ್ತ್ರದ ದಾರಿ ಗಳನ್ನು ಗುರುತಿಸಿದೆ. ವಿಭೂತಿ ಮತ್ತು ಮಂತ್ರಗಳು ಮನುಷ್ಯನ ಈ ಚಂಚಲ ಮನಸ್ಸನ್ನು ನಿಗ್ರಹಿಸುವ ಸಾಧನಗಳಾಗಿ ಕಾರ್ಯಮಾಡುತ್ತವೆ. ಆದಕ್ಕಾಗಿ ಕೆಲವು ಸಾಧನೆಯ ದಾರಿಗಳನ್ನು ಗುರುತಿಸಲಾಗಿದೆ. ವಿಭೂತಿ, ಮಂತ್ರಧಾರಣೆಗಳು ಮನಸ್ಸಿಗೆ ಮತ್ತು ದೇಹಕ್ಕೆ ಕಡಿವಾಣ ಹಾಕುತ್ತವೆ. ಯಾರು ಧರ್ಮದ ದಾರಿಯಲ್ಲಿ ನಡೆಯುತ್ತಾರೆ, ಅವರು ದುಡುಕಿ, ಯಾವ ಕಾರ್ಯಗಳನ್ನೂ ಮಾಡುವುದಿಲ್ಲ. ಒಳಿತು ಕೆಡುಕುಗಳನ್ನು ವಿಚಾರ ಮಾಡಿ ಯೋಗ್ಯವಾದ ಕಾರ್ಯಗಳನ್ನೆ ಮಾಡುತ್ತಾರೆ. ಮನಸ್ಸು ಪಾಪಗಳಲ್ಲಿ ತೊಡಗದೆ ಶ್ರೇಷ್ಠ ಜೀವನ ಮಾರ್ಗದಲ್ಲಿ ಪ್ರವರ್ತಿಸುತ್ತದೆ. ಸಿಂಹದಮರಿಯ ಸೀಳಾಯಿ ತಿಂಬಡೆ ಭಂಗವಿನ್ನಾರದು?ಇದು ಅಮೋಘವಾದ ರೂಪಕ. ಸಿಂಹದ ಮರಿಯನ್ನು ಸೀಳುನಾಯಿ ತಿನ್ನಲು ಸಾಧ್ಯವಿಲ್ಲ. ಭಕ್ತನು ಸಿಂಹದ ಮರಿ.ಸೀಳ್ನಾಯಿ ದುರಿತ ಕೆಡುಕು. ಸದ್ಭಕ್ತನು ಎಂದಿಗೂ ಕೆಡುಕಿನ ಕಡೆಗೆ ಮನಸ್ಸು ಕೊಡುವುದಿಲ್ಲ. ಸದ್ಭಕ್ತನಾಗಿಯೂ ಆತ ಪಾಪ ಮಾಡುವುದಾದರೆ ಆತನಿಗಿಂತಲೂ ಪಾಪಿ ಯಾರೂ ಇಲ್ಲ. ಆ ಭಂಗ ಅವನೆ ಅನುಭವಿಸಬೇಕು. ಧರ್ಮವು ನಮ್ಮನ್ನು ಪಾಪಗಳಿಂದ ದೂರ ಇರುವಂತೆ ಮಾಡುತ್ತದೆ. ಪಾಪದಲ್ಲಿ ರತನಾದವನನ್ನು ಅದರಿಂದ ವಿಮೂಖಗೊಳಿಸಿ ಸದಾಚಾರದ ಕಡೆಗೆ ಕರೆತರುತ್ತದೆ. ಇದು ಈವಚನದ ಆಶಯ.

**5)ಒಲುಮೆ ಒಚ್ಚತವಾದವರು ಕುಲಛಲವನರಸುವರೆ?
ಮರುಳುಗೊಂಡವರು ಲಜ್ಜೆ ನಾಚಿಕೆಯ
ಬಲ್ಲರೆ?ಚೆನ್ನಮಲ್ಲಿಕಾರ್ಜುನಂಗೊಲಿದವರು
ಲೋಕಾಭಿಮಾನವ ಬಲ್ಲರೆ?**

ಪದಗಳ ಅರ್ಥ

ಒಲುಮೆ-ಪ್ರೀತಿ,
ಒಚ್ಚತ-ಇಷ್ಟ ಪಕ್ವ
ಛಲ-ಹಠ,
ಮರುಳು-ಹುಚ್ಚು,
ಲೋಕಾ ಮಾನ- ಗೌರವಾದರ, ಲೋಕದ ಸ್ಥಾನಮಾನ,

ವಚನದ ಅರ್ಥ

ಒಲುಮೆ ಒಚ್ಚತವಾದವರು ಕುಲಛಲವನರಸುವರೆ? ಪ್ರೀತಿಸಿದವರು ಕುಲ ಛಲವನ್ನು ನೋಡುವುದಿಲ್ಲ. ಮರುಳುಗೊಂಡವರು ಲಜ್ಜೆ ನಾಚಿಕೆಯ ಬಲ್ಲರೆ ?

ಯಾರು ಪ್ರೀತಿಯಲ್ಲಿ ಮತ್ತರಾಗಿದ್ದಾರೆ ಅವರು ಪರಸ್ಪರರಲ್ಲಿ ಲಜ್ಜೆ ನಾಚಿಕೆ ನೋಡುವುದಿಲ್ಲ,
ಚೆನ್ನಮಲ್ಲಿಕಾರ್ಜುನದೇವಂಗೊಲಿದವರು ಲೋಕಾಭಿಮಾನವ ಬಲ್ಲರೆ?
ಯಾರು ಪರಮಾತ್ಮನನ್ನು ಒಲಿಸುವ ಭಕ್ತಿಯಲ್ಲಿದ್ದಾರೆ ಅವರು ಲೋಕಾಭಿಮಾನವನ್ನು ನೋಡುವುದಿಲ್ಲ. ಭಕ್ತಿಯನ್ನು ಎರಡು ದೃಷ್ಟಾಂತದ ಮೂಲಕ ವಿವರಿಸಿದ್ದಾರೆ. 1. ಒಲಿದ ಪ್ರೇಮಿಗಳು 2.ಹುಚ್ಚು ಹಿಡಿದವರು.ಯಾರಿಗೆ ಪ್ರೀತಿಯೆ ಸರ್ವಸ್ವವಾಗಿರುತ್ತದೆ, ಅವರು ಜಾತಿ, ಕುಲ,ಅಭಿಮಾನ ನೋಡುವುದಿಲ್ಲ.ಯಾರಿಗೆ ಹುಚ್ಚು ಹಿಡಿದಿರುತ್ತದೆ, ಅವರು ಲೋಕದ ಮಾತುಗಳಿಗೆ ಕಿವಿ ಕೊಡುವುದಿಲ್ಲ. ನಾನುಪ್ರೇಮಿ. ನಾನುಹುಚ್ಚಿ ನಾನು ಪರಮಾತ್ಮನನ್ನು ಪ್ರೀತಿಸಿದ್ದೇನೆ .ನನಗೆ ಪರಮಾತ್ಮನ ಹುಚ್ಚು ಹಿಡಿದಿದೆ.ನನಗೆ ದೇವರನ್ನುಳಿದು
ಬೇರೇನೂ ಬೇಡ. ನನಗೆ ಕುಲಗೌರವವಾಗಲಿ, ಲೋಕದ ಮಾತುಗಳಾಗಲಿ, ಜನಾಪವಾದವಾಗಲಿ ಯಾವುದೂಏನೂ ಅಲ್ಲ.

6)ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು.
ಗಿಡುಗಿಡುದಪ್ಪದೆ ಬೇಡಿದೆ ಎನ್ನಂಗಕ್ಕೆಂದು
ಅವು ನೀಡಿದವು ತಮ್ಮ ಲಿಂಗಕ್ಕೆಂದು .
ಆನು ಬೇಡಿ ಭವಿಯಾದೆನು. ಅವು ನೀಡಿ ಭಕ್ತರಾದವು.
ಇನ್ನು ಬೇಡಿದೆನಾದಡೆ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮಾಣೆ.

ಪದಗಳ ಅರ್ಥ

ಒಡಲು-ದೇಹ,
ಕಳವಳ- ಹಸಿವು.
ತಪ್ಪದೆ -ಬಿಡದೆ,
ಗಿಡ- ಮರ, ಗಿಡ, ಬಳ್ಳಿ, ಕಾಡು .
ಲಿಂಗ-ದೇವರು.
ಭವಿ-ಸತ್ತುಹುಟ್ಟುವವರು. ಭಕ್ತರಲ್ಲದವರು .ಆಶೆಮಾಡಿ,
ಆಣೆ-ಭಾಷೆ, ಪ್ರತಿಜ್ಞೆ,
ಭಕ್ತ-ಕೊಡುವವ, ತೃಪ್ತ ನಿಷ್ಠೆಯಿಂದ.

ವಚನದ ಅರ್ಥ

ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು. ಗಿಡುಗಿಡು ದಪ್ಪದೆ ಬೇಡಿದೆ ಎನ್ನಂಗಕ್ಕೆಂದು ದೇಹದ ಚಿಂತೆಯಿಂದ ಕಾಡುಸೇರಿದೆ. ಗಿಡಮರವನ್ನೆಲ್ಲ ನನ್ನ ಹಸಿವೆಗಾಗಿ ಬೇಡಿದೆ.ಅವು ನೀಡಿದವು ತಮ್ಮ ಲಿಂಗಕ್ಕೆಂದು. ಆನು ಬೇಡಿ ಭವಿಯಾದೆನು . ಅವು ನೀಡು ಭಕ್ತರಾದವು. ನಾನು ಬೇಡಿದ ಕಾಲಕ್ಕೆ ಗಿಡುಮರಗಳು ಪರಮಾತ್ಮನಿಗೆ ಎಂದು ನೀಡಿದವು. ನಾನು ಆ ಫಲ ಬೇಡಿ ಪಡೆದು ಭವಿಯಾದೆನು. ಅವು ಪರಮಾತ್ಮನಿಗೆ ಎಂದು ನೀಡಿ ಭಕ್ತರಾದವು. ಇನ್ನು ಬೇಡಿದೆನಾದಡೆ ಚೆನ್ನಮಲ್ಲಿಕಾ ರ್ಜುನಯ್ಯ ನಿಮ್ಮಾಣೆ. ಪರಮಾತ್ಮನೆ ನಾನು ಇನ್ನು ಬೇಡುವುದಿಲ್ಲ. ಅಕ್ಕನವರು ತಪಸ್ಸಿಗಾಗಿ ಶ್ರೀ ಶೈಲ ಕಾಡಿಗೆ ಬಂದರು.

ಪರಮಾತ್ಮನ ಹಸಿವು ಅಪಾರವಾಯಿತು. ತಪಸ್ಸು ಅವರ ಜೀವನವಾಯಿತು. ಆದರೆ ದೇಹವೊಂದು ಇದೆಯಲ್ಲ ಅದಕ್ಕೆ ಅನ್ನ ಆಶ್ರಯ, ಇತ್ಯಾದಿಗಳೆಲ್ಲ ಬೇಕಾಯಿತು. ಹಸಿವಾದಾಗ ಗಿಡಮರಗಳ ಕಡೆಗೆ ನೋಡಿದರು. ಅವು ಹಣ್ಣು,ಸೊಪ್ಪು, ನೀರುಗಳನ್ನು ನೀಡಿದವು. ಅವು ತಮ್ಮ ವಂಶಾಭಿವೃದ್ಧಿ ಗಾಗಿ ನೀಡಿದವು. ಸೃಷ್ಟಿಕರ್ತನಿಗಾಗಿ ಅವು ನಿಡಿದವು. ಅವನ್ನು ನಾನು ಪಡೆದು ಹಸಿವು ನೀಗಿಸಿಕೊಂಡೆ. ಅವು ನೀಡಿ ಭಕ್ತರಾದವು. ನಾನು ಪಡೆದುಕೊಂಡು ಭವಿಯಾದೆನು. ನಾನು ಆಶೆ,ಹಸಿವಿನಿಂದ ಸಣ್ಣವಳಾದೆನು. ಅವುನೀಡಿ ತೃಪ್ತಿಪಟ್ಟು ಭಕ್ತರಾದವು. ಕೊಡುವಲ್ಲಿ ತೃಪ್ತಿ, ಧನ್ಯತೆ ದೊಡ್ಡಗುಣವಿದೆ. ಪಡೆಯುವಲ್ಲಿ ಆಶೆ ಹಂಬಲ,ಇಚ್ಛೆಗಳಿವೆ. ನಾನು ಭಕ್ತಿಗಾಗಿ ಬಂದವಳು. ಇನ್ನು ಬೇಡುವುದಿಲ್ಲ. ಪರಮಾತ್ಮನೆ ಆಣೆಮಾಡಿ ಹೇಳುತ್ತೇನೆ. ಇನ್ನು ಬೇಡುವುದಿಲ್ಲ. ಈದೇಹದ ಮೇಲೆ ಮೋಹವಿಲ್ಲ. ನಾನು ಇನ್ನು ದೇಹಕ್ಕಾಗಿ ಬದುಕುವುದಿಲ್ಲ. ನಿನಗಾಗಿ ನಿನ್ನ ಅನುಗ್ರಹಕ್ಕಾಗಿ ಬದುಕುತ್ತೇನೆ. ಇದು ನನ್ನ ದೃಢ ಪ್ರತಿಜ್ಞೆ ಹಸಿವನ್ನು ಗೆಲ್ಲುವ ಅನುಷ್ಠಾನ ಅರಂಭಿಸಿದ್ದಾರೆ.

7)ಒಬ್ಬರ ಮನೆಯಲುಂಡೆ, ಒಬ್ಬರ ಮನೆಯಲುಟ್ಟೆ.
ಒಬ್ಬರ ಮನೆಯ ಬಾಗಿಲ ಕಾದಡೆಮಗೇನಯ್ಯ?
ನೀನಾರಿಗಾದರೂ ಒಲಿ.ನಮಗೇನಯ್ಯ. ಚೆನ್ನಮಲ್ಲಿಕಾರ್ಜುನಯ್ಯ
ಭಕ್ತಿಯ ಬೇಡಿ ಬಾಯಿ ಬೂತಾಯಿತ್ತು.

ವಚನದ ಅರ್ಥ

ಶಿವನು ಭಕ್ತರಿಗೆ ಮೆಚ್ಚಿ ಅನುಗ್ರಹ ಮಾಡಿದ ಎಂಬ ಕಥೆಗಳಿವೆ. ಇಂತಹ ಕಥೆಗಳನ್ನು ಕೇಳಿ ನಂಬಿ, ಶ್ರದ್ಧೆ ಇಟ್ಟು ಭಕ್ತಿಮಾಡಿ, ಪ್ರಾರ್ಥಿಸಿ,ಬೇಡಿ ಕೇಳಿ ಕೇಳಿ ಸಾಕಾಗಿದೆ .ಕೊನೆಗೆ ಈ ಭಕ್ತಿ ವಿಚಾರದಲ್ಲಿ ಬೇಸರ ಬಂದಿದೆ. ಹೋಗೊ ಮಾರಾಯ . ನಾನೂ ಭಕ್ತಿ ಮಾಡಿ ಮಾಡಿ ಸಾಕಾದೆ. ನೀಯಾರಿಗಾದರೂ ಒಲಿ ಬಿಡು. ಆ ಕಥೆ ತೆಗೆದುಕೊಂಡು ಮಾಡುವುದೇನು? ಅವರಿಗೆ ಹಾಗೆ ಇವರಿಗೆ ಹೀಗೆ. ನಮಗೆ ಹೇಗೆ? ಈಗ ನಮ್ಮ ಕಥೆ ಹೇಳು ?ಇದು ಈಗಿನ ವಿಚಾರವಾಗಿದೆ. ಆ ಕಥೆಗಳನ್ನು ಪ್ರಸ್ತಾಪಿಸಿ ಉಪಹಾಸ ಮಾಡಿರುವ ರೀತಿ ನೋಡಿ. ಬಹು ಹಾಸ್ಯಮಯವೂ ಚೇತೋಹಾರಿಯೂ ಆಗಿದೆ.

ಒಬ್ಬರಮನೆಯಲುಂಡೆ. ಚೆನ್ನಯ್ಯನಮನೆಯಲ್ಲಿ ಊಟ ಮಾಡಿದೆ. ಒಬ್ಬರ ಮನೆಯಲುಟ್ಟಿ, ದಾಸಿಮಯ್ಯನ ಮನೆಯಲ್ಲಿ ವಸ್ತ್ರ ಉಟ್ಟೆ. ಒಬ್ಬರ ಮನೆಯ ಬಾಗಿಲ ಕಯ್ದಡಮಗೇನಯ್ಯ? ಬಾಣನಮನೆಯ ಬಾಗಿಲ ಕಾಯ್ದೆ. ಈಗ ನಮಗೆ ಬಂದ ಭಾಗ್ಯವೇನು ಹೇಳು? ನೀನಾರಿಗಾದರೂ ಒಲಿ ನಮಗೇನಯ್ಯ? ಭಕ್ತಿಯ ಬೇಡಿ ಬಾಯಿ ಬೂತಾಯಿತ್ತು. ಹೋಗೊ ಮಾರಾಯ. ನೀಯಾರಿಗಾದರೂ ಒಲಿ. ಈಗ ನಮ್ಮ ಕಥೆ ಹೇಳು, ಬೇಡಿಬೇಡಿ ಸಾಕಾಯಿತು. ಹಾಡಿಹಾಡಿಸಾಕಾಯಿತು. ಭಕ್ತಿ ಮಾಡಿ ನಮ್ಮ ಬಾಯಿಯೆ ಬೂತವಾಗಿ ಹೋಯಿತು. ಹೋಗತ್ತಗೆ. ನೋಡಿ ನೋಡಿ ಸಾಕಾಯಿತು. ಭಕ್ತನಿಗೆ ದೇವರ ಬಗೆಗೆ, ಕೆಲವು ಸಲ ಹೀಗಾಗುತ್ತದೆ.

8) ಒಳಗಣ ಗಂಡನವ್ವ. ಹೊರಗಣ ಮಿಂಡನವ್ವ.
ಎರಡನೂ ನಡೆಸಲು ಬಾರದವ್ವ .
ಲೌಕಿಕ ಪರಮಾರ್ಥವೆಂಬೆರಡನೂ ನಡೆಸಲು ಬಾರದವ್ವ.
ಚೆನ್ನಮಲ್ಲಿಕಾರ್ಜುನಯ್ಯ ಬಿಲ್ವ ಬೆಳವಲಕಾಯ
ಒಂದಾಗಿ ಹಿಡಿಯಲು ಬಾರದು.

ಪದಗಳ ಅರ್ಥ

ಒಳಗಣ ಗಂಡ -ಪರಮಾತ್ಮ
,ಹೊರಗಣ ಮಿಂಡ - ಬೇಡವಾದ ಪುರುಷ,
ಲೌಕಿಕ-ಸಂಸಾರ,
ಪರಮಾರ್ಥ- ಅನುಭಾವ ಜೀವನ.
ಬಿಲ್ವ- ಬಿಲ್ವಪತ್ರೆಕಾಯಿ,
ಬೆಳವಲ-ಬೇಲದ ಕಾಯಿ

ವಚನದ ಅರ್ಥ

ಒಳಗಣ ಗಂಡನವ್ವ. ಹೊರಗಣ ಮಿಂಡನವ್ವ. ಎರಡನೂ ನಡೆ ಸಲು ಬಾರದವ್ವ.ಒಳಗಿನ ಗಂಡ ನನ್ನ ಚೆನ್ನಮಲ್ಲಿಕಾರ್ಜುನ ಹೊರಗಿನ ಗಂಡ ನಾನು ಒಲ್ಲೆ ಎಂದರೂ ಲಗ್ನವಾಗು ಎಂದು ಗಂಟುಬಿದ್ದಿರುವ ರಾಜ. ನನಗೆ ಈ ಎರಡೂ ವ್ಯಕ್ತಿಗಳ ಜೊತೆ ಜೀವನ ನಡೆಸಲು ಬರುವುದಿಲ್ಲ. ನನಗೆ ಚೆನ್ನಮಲ್ಲಿಕಾರ್ಜುನನೆ ಬೇಕು.ಅಕ್ಕಮಹಾದೇವಿಯವರು ಪರಮಾತ್ಮನ ವಿಚಾರಗಳನ್ನು ತಲೆಯಲ್ಲಿ ತುಂಬಿ ಕೊಂಡು ಶಿವನನ್ನೆ ಗಂಡನನ್ನಾಗಿ ಪಡೆಯಬೇಕೆಂದು ಬಾಲ್ಯದಲ್ಲಿ ತಮಗೆ ತಾವೆ ನಿರ್ಧರಿಸಿಬಿಟ್ಟರು. ಇದಕ್ಕೆ ಶಿವ-ಗೌರಿಯರ ಕಥೆಯೂ ಅವರಿಗೆ ಒಂದು ಊರು ಗೋಲಾಯಿತು. ತಂದೆ ತಾಯಿಗಳು ಮಗಳಿಗೆ ವಿವಾಹ ಮಾಡಲು ಎಷ್ಟೆ ಪ್ರಯತ್ನಿ ಸಿದರೂ ಅಕ್ಕಮಹಾದೇವಿಯವರು ವಿರೋಧಿಸಿದರು. ಕೊನೆಗೆ ರಾಜನ ದೃಷ್ಟಿ ಮಹಾದೇವಿಯವರ ಮೇಲೆ ಬಿದ್ದು ತಾನು ಲಗ್ನ ಮಾಡಿಕೊಳ್ಳುವುದಾಗಿ ಹಿಡಿತರಿಸಿದ . ಪ್ರಾಣಬೆದರಿಕೆಯನ್ನೂ ಒಡ್ಡಿದ. ತಂದೆ, ತಾಯಿ, ಗುರು, ಹಿರಿಯರನ್ನೆಲ್ಲ ಬಂಧಿಸ ಲಾಯಿತು . ಇಷ್ಟಾದರೂ ಅಕ್ಕಹಾದೇವಿಯವರು ಮಾತ್ರ ನಾನು ಲಗ್ನವಾಗುವುದಾದರೆ ಪರಮಾತ್ಮ ಚೆನ್ನಮಲ್ಲಿಕಾರ್ಜುನನನ್ನೆ ಎಂದುಬಿಟ್ಟರು. ಲೋಕದ ಪುರುಷರು ಯಾಕೆ ಬೇಡ ಎಂಬುದಕ್ಕೆ ಈವಚನದಲ್ಲಿ ಉತ್ತರಿಸಿದ್ದಾರೆ.

ಒಳಗಂಡನವ್ವಾ. ಹೊರಗಣ ಮಿಂಡನವ್ವ. ಎರಡನೂ ನಡೆಸಲು ಬಾರದವ್ವ. ನನಗೆ ಒಳಗಿನ ಗಂಡ ಚೆನ್ನಮಲ್ಲಿಕಾರ್ಜುನ, ಹೊಗಣ ಗಂಡ, - ನೀವು ಏನುಲಗ್ನವಾಗು ಎಂದು ಒತ್ತಾಯಿಸುತ್ತಿರುವಿರಿ. ಈ ರಾಜ ಹೊರಗಣ ಗಂಡ. ಇಂತಹವನ ಜೊತೆ ನನಗೆ ಸಂಸಾರ ನಡೆಸಲು ಆಗುವುದಿಲ್ಲ. ಲೌಕಿಕ, ಪರಮಾರ್ಥಎಂಬೆರಡನೂ ನಡೆಸಲು ಬಾರದವ್ವ. ನನ್ನಿಂದ ಸಂಸಾರ, ಪರಮಾರ್ಥ ಎರಡನ್ನು ಒಟ್ಟಿಗೆ ನಡೆಸಲು ಆಗುವುದಿಲ್ಲ. ಚೆನ್ನಮಲ್ಲಿಕಾರ್ಜುನನು ನನ್ನ ಗಂಡ. ಬಿಲ್ವ ಬೆಳವಲಕಾಯಿ ಒಂದಾಗಿ

ಹಿಡಿಯಲು ಬಾರದು. ನೋಡಲು ಬಿಲ್ವ ಪತ್ರೆಕಾಯಿ, ಬೇಲದ ಕಾಯಿ ಒಂದೆ ರೀತಿ ಕಾಣುತ್ತವೆ. ಆದರೆ ಒಳಗಿನ ಹೂರಣ, ಉಪಯೋಗಗಳೆ ಬೇರೆ ಬೇರೆ. ಬಿಲ್ವಪತ್ರೆ ಕಾಯಿಯು ಪೂಜೆಗೆ ಪತ್ರ ಕೊಡುತ್ತದೆ. ಬೇಲದಕಾಯಿ ತಿನ್ನಲು,ಮತ್ತು ಪಾನಕ ಮಾಡಿ ಕುಡಿಯಲು ಬರುತ್ತದೆ. ಇದು ಲೌಕಿಕದ ಕಾಯಿ. ಸಂಸಾರದ ಭೋಗಕ್ಕೆ ಬರುತ್ತದೆ. ಬಿಲ್ವಪತ್ರೆ ಕಾಯಿ ಕಾಯಿಲೆ ವಾಸಿಮಾಡಲು ಔಷಧಿಯೂ ಆಗುತ್ತದೆ. ಇದರದು ತ್ಯಾಗಜೀವನ. ಅದರದು ಭೋಗಜೀವನ. ನನ್ನ ಬದುಕು ಭೋಗ ಜೀವನವಲ್ಲ. ಅನುಭಾವ ಜೀವನಕ್ಕೆ ಸಲ್ಲುವಂಥದು.ಬಿಲ್ವಪತ್ರೆಕಾಯಿ,ಬೇಲದಕಾಯಿ ಯರೂಪಕಗಳು ತುಂಬ ಧ್ವನಿಪೂರ್ಣವಾಗಿವೆ. ಈ ಉದಾಹರಣೆ ಮೂಲಕ ಅವರ ವ್ಯಕಿತ್ವ,ಎತ್ತರ ಎರಡೂ ಕಂಗೊಳಿಸುತ್ತವೆ. ಯಾರು ಎಷ್ಟೇ ಹೇಳಿದರೂ,ಎಡರು ತೊಡರು ಎಷ್ಟೇ ಬಂದರೂ, ಅಕ್ಕನವರು ತಮ್ಮ ಗುರಿ ಸಾಧಿಸಿದರು.

9)ಒಮ್ಮೆ ಕಾಮನ ಕಾಲ ಹಿಡಿವೆ.
ಒಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ.
ಸುಡು ವಿರಹವನು ಇನ್ನಾರಿಗೆ ಧೃತಿಗೆಡುವೆ.
ಚೆನ್ನಮಲ್ಲಿಕಾರ್ಜುನ ಎನ್ನನೊಲ್ಲದ ಕಾರಣ ಎಲ್ಲರಿಗೆ ಹಂಗಿತಿಯಾದೆನವ್ವ.

ವಚನದ ಅರ್ಥ

ಒಮ್ಮೆ ಕಾಮನ ಕಾಲ ಹಿಡಿವೆ. ಒಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ. ಒಂದುಸಲ ಕಾಮನ ಕಾಲು ಹಿಡಿಯುತ್ತೇನೆ. ಇನ್ನೊಮ್ಮೆ ಚಂದ್ರನಿಗೆ ಸೆರಗೊಡ್ಡಿ ಬೇಡುತ್ತೇನೆ. ಸುಡು ವಿರಹವನು. ಇನ್ನಾರಿಗೆ ಧೃತಿಗೆಡುವೆ. ಈ ವಿರಹವನ್ನು ಸುಟ್ಟು ಬಿಡು. ಇನ್ನು ಯಾರಿಗಾಗಿ ಧೈರ್ಯ್ಯಗೆಡುವೆ. ಚೆನ್ನಮಲ್ಲಿಕಾರ್ಜುನ ಎನ್ನ ಒಲ್ಲದ ಕಾರಣ ಎಲ್ಲರಿಗೆ ಹಂಗಿತಿ ಯಾದೆನವ್ವ. ಚೆನ್ನಮಲ್ಲಿಕಾರ್ಜುನನು ಎನ್ನನು ಒಲ್ಲನು .ಆದಕಾರಣ ಇತರರ ಹಂಗಿಗೆ ಸಿಕ್ಕಿದೆನು. ಈ ವಚನ ಸರಳವಿದೆ . ಅರ್ಥವಾಗುತ್ತದೆ. ಆದರೆ ಅರ್ಥ ಹೇಳಿ ಕೈ ಚೆಲ್ಲುವಷ್ಟು ಸರಳವಲ್ಲ ಈವಚನ. ಇದೊಂದು ಸುಂದರ ಕಾವ್ಯ. ಈರೂಪಕ ಪರಿಭಾವಿಸಿದಷ್ಟೂ ಸುಂದರವಾಗಿದೆ. ಒಮ್ಮೆ ಕಾಮನ ಕಾಲ ಹಿಡಿವೆ. ಒಮ್ಮೆ ಚಂದ್ರ ಮಂಗೆ ಸೆರಗೊಡ್ಡಿ ಬೇಡುವೆ. ಈ ಸಾಲು ಅವರ ಚೆನ್ನಮಲ್ಲಿಕಾರ್ಜುನನ ವಿರಹದ ಪರಾಕಾಷ್ಠೆಯನ್ನು ವಿವರಿಸುತ್ತದೆ. ಆ ವಿರಹ ಎಷ್ಟು ಎಂದರೆ ಚಂದ್ರನನ್ನೂ ಬೇಡು ವಷ್ಟು . ಕಣ್ಣಿಗೆ ಕಾಣದ ಕಾಮನನ್ನೂ ವಿನಂತಿಸುವಷ್ಟು ಪರಮಾತ್ಮನ ವಿರಹವಿದೆ. ಚಂದ್ರಮರ ನೆರವು ಪಡೆಯಲು ಪ್ರಯತ್ನವೂ ಇದೆ. ನನ್ನ ಪ್ರೀತಿ, ಪ್ರೇಮವನ್ನು ಚೆನ್ನಮಲ್ಲಿಕಾರ್ಜುನನಿಗೆ ತಿಳಿಸಿರಿ. ಅವನಿಗೂ ನನ್ನಲ್ಲಿ ವಿರಹ, ಪ್ರೀತಿ ಉಂಟಾಗು ವಂತೆ ಮಾಡಿರಿ. ಇದು ಅವರಲ್ಲಿ ಕೇಳುತ್ತಿರುವ ನೆರವು. ಪ್ರೀತಿಸಿದವರು ಸಿಗದಿದ್ದ ಮೇಲೆ ಈ ಜೀವನವಾದರೂ ಯಾಕೆ ಬೇಕು. ಈ ವಿರಹದ ಸುಡುಜ್ವರ ಅನೇಕರಲ್ಲಿ ಹಾಡಾಗಿ ಹರಿಯುತ್ತದೆ.

10)ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ ನಲ್ಲನ
ಒಡಗೂಡಿ ಸುಖಿಯಾದೆ ಕೇಳಿರಯ್ಯ.
ಭಾಷೆ ಪೈಸರವಿಲ್ಲ ಒಸರಿಸನನ್ಯಕ್ಕೆ.
ಆಸೆ ಮಾಡೆನು ಮತ್ತೆ ಭಿನ್ನ ಸುಖಕ್ಕೆ. ಆರಳಿದು ಮೂರಾಗಿ, ಮೂರಳಿದು ಎರಡಾಗಿ
ಎರಡಳಿದು ಒಂದಾಗಿ ನಿಂದೆನಯ್ಯ.
ಪ್ರಭುದೇವರಿಂದ ಕೃತಕೃತ್ಯಳಾದೆನು.
ಎಲ್ಲ ಶರಣರಿಗೆ ಶರಣು ಶರಣಾರ್ಥಿ.
ಮರೆಯಲಾಗದು ನಿಮ್ಮ ಶಿಶುವೆಂದು ಎನ್ನನು. ಚೆನ್ನಮಲ್ಲಿಕಾರ್ಜುನನ
ಬೆರಸೆಂದು ಹರಸುತ್ತಿಹುದು.

ಪದಗಳ ಅರ್ಥ

ಪೈಸರ-ಮುರಿಯುವುದಿಲ್ಲ.
ಒಸರಿಸು-ಹತ್ತಿರವಾಗು, ಆಶೆಮಾಡು.
ಅನ್ಯ-ವಿಷಯ.
ಆರು-ಷಡ್ರಿಪು,
ಮೂರು-ತನುಮನಪ್ರಾಣ,
ಎರಡು-ನಾನು, ನೀನು.
ಬೆರಸು-ಕೂಡು.

ವಚನದ ಅರ್ಥ

ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ ನಲ್ಲಿನ ಒಡಗೂಡಿ ಸುಖಿಯಾದೆ ನವ್ವಾ. ದೇಹವಿಲ್ಲದ ಮಾತುಗಳಿಲ್ಲದ ಅಂತ್ಯವಿಲ್ಲದ ಸಖನನ್ನು ಲಗ್ನಮಾಡಿಕೊಂಡು ನಾನು ಸುಖಿಯಾಗಿರುವೆನು. ಭಾಷೆ ಪೈಸರವಿಲ್ಲ. ಒಸರಿಸೆನನ್ನಕ್ಕೆ. ಆಸೆಮಾಡೆನು ಮತ್ತೆ ಭಿನ್ನ ಸುಖಕ್ಕೆ ಕೊಟ್ಟ ಮಾತಿಗೆ ತಪ್ಪುವುದಿಲ್ಲ. ಇನ್ನೊಂದಕ್ಕೆ ಹಾರಯಿಸುವು ದಿಲ್ಲ. ಮತ್ತೆ ಬೇರೆ ಸುಖಕ್ಕೆ ಆಸೆಮಾಡುವುದಿಲ್ಲ. ಆರಳಿದು ಮೂರಾಗಿ, ಮೂರ ಳಿದು ಎರಡಾಗಿ ಎರಡಳಿದು ಒಂದಾಗಿ ನಿಂದೆನಯ್ಯ. ಆರು ಅರಿಷಡ್ವರ್ಗಗಳನ್ನು ಅಳಿದು ತನುಮನಪ್ರಾಣಮೂರಾಗಿ ನಿಂದೆ. ಈ ತನುಮನಪ್ರಾಣ ನನ್ನದು ಎಂಬುದನ್ನು ಅಳಿದು ನಾನು ನೀನು, ಭಕ್ತ ಭಗವಾನ ಎಂದು ಎರಡಾದೆ. ಈ ಎರಡೂ ಅಳಿದು ನಾನು ನೀನು. ನೀನೆ ನಾನು ಎನ್ನುವ ನೆಲೆಗೆ ಬಂದು ನಿಂದೆ. ಪ್ರಭುದೇವರಿಂದ ಕೃತ ಕೃತ್ಯಳಾದೆನಯ್ಯ. ಎಲ್ಲ ಶರಣರಿಗೆ ಶರಣು ಶರಣಾರ್ಥಿ. ನಾನು ಪ್ರಭುದೇವರಿಗೆ ಋಣಿ. ಅವರಿಂದ ಬೇಕಾದ ಜ್ಞಾನವೆಲ್ಲ ಪಡೆದೆ.ಪ್ರಭುದೇವರಿಂದ ಪುಣ್ಯ ಸಂಪಾದನೆಯಾಯಿತು.ಎಲ್ಲ ಶರಣರಿಗೆ ಶರಣು ಶರಣಾರ್ಥಿಗಳು. ಮರೆಯಲಾಗದು ನಿಮ್ಮ ಶಿಶುವೆಂದು ಎನ್ನನು. ಚೆನ್ನಮಲ್ಲಿಕಾರ್ಜುನನ ಬೆರಸೆಂದು ಹರಸುತ್ತಿಹುದು. ನಾನು ನಿಮ್ಮ ಕರುಣದ ಕಂದ. ನಾನೂ ಮರೆಯೆನು. ನೀವೂ ಮರೆಯದಿರಿ. ಚೆನ್ನಮಲ್ಲಿಕಾ ರ್ಜುನನಲ್ಲಿ ಬಯಲಾಗು ಅವನ ಅನುಗ್ರಹವಾಗಲಿ ಎಂದು ಎಲ್ಲರು ಹರಸಿರಿ.ಅಕ್ಕ ಮಹಾದೇವಿಯವರ ಪ್ರಾರ್ಥನೆ ಇದು. ಅಕ್ಕಮಹಾದೇವಿಯವರು ಈ ದೇಹದ ಸಂಬಂಧವನ್ನು ಹರಿದುಕೊಳ್ಳಲು ನಿರ್ಧರಿಸಿದ್ದಾರೆ. ಇನ್ನು ಈ

ದೇಹ'ದ ಅವಶ್ಯಕತೆಯಿಲ್ಲ. ಮರ್ತ್ಯದ ಜೀವನ ಸಾಕು ಎಂದು ನಿರ್ಧರಿಸಿಬಿಟ್ಟರು. ನಾವೆಲ್ಲ ಆಯುಷ್ಯ ಬೇಕು . ಅದು ಬೇಕು ಇದು ಬೇಕು ಎಂದು ಹಾರಯಿಸುತ್ತೇವೆ. ಅಕ್ಕಮಹಾದೇ ವಿಯವರು ಎಲ್ಲ ಇದ್ದೂ ಈ ಶರೀರದ ಹಂಗು ಸಾಕು ಎಂದು ನಿರ್ಧರಿಸಿಬಿಟ್ಟರು. ಜೀವನದ ಕ್ಷಣಭಂಗುರತೆಯನ್ನರಿತ ಅಕ್ಕನವರು ಈ ದೇಹ ವಿಸರ್ಜಿಸಿ ಬಿಡಲು ನಿರ್ಧಾರ ಮಾಡಿ ಬಿಟ್ಟರು. ಲೋಕೋತ್ತರವಾದ ಚೆಲುವಿದೆ. ತಾರುಣ್ಯವಿದೆ.ಪ್ರತಿ ಭೆಯಿದೆ. ಜ್ಞಾನವೂ ಇದೆ. ಎಲ್ಲ ಸೌಭಾಗ್ಯವೂ ಅವರ ಕಾಲಬಳಿ ಬಂದು ಬಿದ್ದಿದೆ. ಯಾವುದೆ ರೋಗಿಯಲ್ಲ. ವೃದ್ಧಾಪ್ಯವೂ ಅಲ್ಲ. ಯಾವ ಕೊರತೆಗಳೂ ಇಲ್ಲ. ಆದರೂ ಈ ಮರ್ತ್ಯಜೀವನ ಸಾಕು ಎಂದು ನಿರ್ಧರಿಸಿದರು. ಲೋಕದ ಯಾವ ಸಂಬಂಧಗಳೂ ಅವರನ್ನು ಹಿಡಿದಿಡಲಾಗಲಿಲ್ಲ. ಭಕ್ತಿ ಸಂಬಂಧಗಳನ್ನೂ ಕೊಡವಿ ಕೊಂಡು ಬಿಟ್ಟರು. ಅಕ್ಕಮಹಾದೇವಿಯವರ ಈ ವೈರಾಗ್ಯದ ಎತ್ತರ ಜಗತ್ತಿನಲ್ಲಿ ಅಪೂರ್ವವಾದುದು. ಹಿಂದೆ ಹುಟ್ಟಿಲ್ಲ. ಮುಂದೆ ಹುಟ್ಟುವುದಿಲ್ಲ.

11)ಓದಿ ಓದಿ ವೇದ ವಾದಕ್ಕಿಕ್ಕಿತ್ತು ಕೇಳಿಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು.
ಅರಿದ ಅರಿದೆನೆಂದು ಆಗಮ ಅರೆಯಾಗಿ ಹೋಯಿತ್ತು.
ಪೂರೈಸಿಹೆ ಪೂರೈಸಿಹೆನೆಂದು ಪುರಾಣ ಪೂರ್ವಬಟ್ಟೆಗೆ ಹೋಯಿತ್ತು.
ನಾನೆತ್ತ?ತಾನೆತ್ತ ಬೊಮ್ಮ ಬಟ್ಟ ಬಯಲು ಚೆನ್ನಮಲ್ಲಿಕಾರ್ಜುನಾ.

ವಚನದ ಅರ್ಥ

ವೇದ-ನಾಲ್ಕು ವೇದಗಳು. ಋಕ್,ಯಜುರ್, ಸಾಮ,ಅಥರ್ವಣ .
ಶಾಸ್ತ್ರ-ಹಲವು.ನೂರೆಂಟು.
ಆಗಮ-ಇಪ್ಪತ್ತೆಂಟು.
ಪುರಾಣ- ಒಂದೊಂದು ದೇವತೆಗೂ ಒಂದೊಂದು ಪುರಾಣ. ಬಟ್ಟೆ-ದಾರಿ, ಅಭಿಪ್ರಾಯ,
ಬೊಮ್ಮ-ಬ್ರಹ್ಮ.

ವಚನದ ಅರ್ಥ

ಓದಿಓದಿ ವೇದ ವಾದಕ್ಕಿಕ್ಕಿತ್ತು ಕೇಳಿಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು. ವೇದವು ಓದಿನ ವಿದ್ವತ್ತಿನಿಂದ ಕೂಡಿದೆ.ವೇದ ಓದು, ವಾದ ಪ್ರಧಾನ. ಶಾಸ್ತ್ರವುಕೇಳುವ, ಸಂದೇಹ ಪ್ರಧಾನವಾದ ವಿದ್ಯೆ. ಅರಿದಹೆ ಅರಿದಹೆನೆಂದು ಆಗಮ ಅರೆಯಾಗಿ ಹೋಯಿತ್ತು ತಿಳಿಯುತ್ತೇನೆ ತಿಳಿಯುತ್ತೇನೆ ಎಂದು ಆಗಮಗಳು ತಿಳಿಯಲಾರದೆ ಕೂತವು. ಪೂರೈಸಿಹೆ ಪೂರೈಸಿಹೆನೆಂದು ಪುರಾಣ ಪೂರ್ವಬಟ್ಟೆಗೆ ಹೋಯಿತ್ತು. ಈಗ ಮುಕ್ತಾಯ ಮಾಡುತ್ತೇನೆ ಈಗ ಮುಗಿಯುತ್ತದೆ ಎಂದು ಹೇಳುತ್ತ ಪೂರ್ವದ ಹಿಂದಿನ ದಾರಿಗೆ ಹೋಯಿತು. ಪುರಾಣ ಈ ಕಾಲಕ್ಕೇನು ಮುಗಿಯುವುದಿಲ್ಲ. ನಾನೆತ್ತ ತಾನೆ? ಬೊಮ್ಮ ಬಟ್ಟ ಬಯಲು ಚೆನ್ನಮಲ್ಲಿಕಾರ್ಜುನ ನಾನೆಲ್ಲಿ ಪರಮಾ ತ್ಮನೆಲ್ಲಿ? ಬ್ರಹ್ಮ ಬಟ್ಟ ಬಯಲು ಚೆನ್ನಮಲ್ಲಿಕಾರ್ಜುನ ಬರೀ ಬಯಲು.

12)ಒಬ್ಬಂಗೆ ಇಹವುಂಟು. ಒಬ್ಬಂಗೆ ಪರವುಂಟು. ಒಬ್ಬಂಗೆ ಇಹವಿಲ್ಲ. ಒಬ್ಬಂಗೆ ಪರವಿಲ್ಲ ಒಬ್ಬಂಗೆ ಇಹಪರವೆರಡೂ ಇಲ್ಲ. ಚೆನ್ನಮಲ್ಲಿಕಾರ್ಜುನ ದೇವನ ಶರಣರಿಗೆ ಇಹಪರವೆರಡೂ ಉಂಟು.

ಪದಗಳ ಅರ್ಥ

ಇಹ-ಲೌಕಿಕ ಜೀವನ, ಪರ-ಪರಮಾತ್ಮ,ಇನ್ನೊಂದು . ಇಹವನ್ನು ಮೀರಿದ್ದು.

ವಚನದ ಅರ್ಥ

ಇದು ಒಗಟಿನ ರೀತಿಯಲ್ಲಿದೆ. ಇಹ-ಪರ ಇಲ್ಲಿ ಮೊದಲ ಸಲ ಚರ್ಚೆಯ ವಸ್ತುವಾಗಿದೆ . ಒಬ್ಬರಿಗೆ ಇಹವುಂಟು ಒಬ್ಬರಿಗೆ ಪರವುಂಟು. ಯಾರು ದೇಹವೇ ಸತ್ಯ ಎಂದು ತಿಳಿದಿರುವರೋ ಅವರಿಗೆ ಪರವಿಲ್ಲ. ಇಹವಿದೆ. ಯಾರು ಇಹವೊಂದು ಮಾಯೆ ಪರವೊಂದೇ ಸತ್ಯ ಎಂದು ತಿಳಿದಿರುವರೊ ಅವರಿಗೆ ಇಹವೇನಿದ್ದರೂ ಸುಳ್ಳು. ಪರವೊಂದೆ ಸತ್ಯ. ಒಬ್ಬಂಗೆ ಇಹಪರವೆರಡೂ ಇಲ್ಲ. ಮೂರ್ಖರಿಗೆ, ಅಜ್ಞಾನಿ ಗಳಿಗೆ ಇಹವು ಇಲ್ಲ. ಪರವು ಇಲ್ಲ. ಅವರ ಜೀವನ ವ್ಯರ್ಥ. ಚೆನ್ನಮಲ್ಲಿಕಾರ್ಜುನ ದೇವನ ಶರಣರಿಗೆ ಇಹಪರವೆರಡೂ ಉಂಟು. ಶರಣರು ಈ ಜಗತ್ತನ್ನು ಮಾಯೆಎನ್ನು ವುದಿಲ್ಲ. ಇದು ನಮ್ಮ ತಪ್ಪನ್ನು ತಿದ್ದಿಕೊಂಡು ಪರಿಪೂರ್ಣರಾಗುವ ಕಾರ್ಯಕ್ಷೇತ್ರ. ಆದುದರಿಂದ ಈಜಗತ್ತು ಮಾಯೆಯಲ್ಲ. ಪರವೂ ಉಂಟು. ಆದರೆ ಈ ಜೀವನವೂ ಶಾಶ್ವತವಲ್ಲ. ನಾವು ಒಂದು ದಿನ ಈದೇಹವನ್ನು ಬಿಟ್ಟು ಹೋಗುತ್ತೇವೆ. ದೇಹದಾಚೆಗೆ ನಮ್ಮ ಪಯಣವಿದೆ. ಆದುದರಿಂದ ಪರವೂ ಇದೆ. ಕೆಲವರು ತತ್ವದ ಪ್ರಕಾರ ವಾದಿಸುತ್ತಾರೆ. ಬ್ರಹ್ಮವೊಂದೆ ಸತ್ಯ ಉಳಿದುದೆಲ್ಲವೂ ಅಸತ್ಯ. ಇವರ ಪ್ರಕಾರ ಇಹ ಸುಳ್ಳು. ಪರ ಸತ್ಯ. ಇನ್ನು ಕೆಲವರ ಪ್ರಕಾರ ನಾನೂ ಮಾಯೆ ಜಗತ್ತೂ ಮಾಯೆ ಇವರಿಗೆ ಇಹವೂ ಇಲ್ಲ. ಪರವೂ ಇಲ್ಲ.

ಹರಿಹರನಂತಹ ಕವಿಗಳಿಗೆ ಇಹವೂ ಇದೆ. ಕೈಲಾಸವೂ ಇದೆ. ಇಹಲೋಕ ಪರಲೋಕ ತಾನಿದ್ದಲ್ಲಿ ಎಂದು ಪ್ರಭುದೇ ವರು ಹೇಳಿದ್ದಾರೆ. ಅಂದರೆ ನಾವು ಇದ್ದರೆ ಇಹಲೋಕ ಪರಲೋಕ ಇಲ್ಲವಾದರೆ ಎರಡೂ ಇಲ್ಲ. ಬಸವಣ್ಣನವರು ಮರ್ತ್ಯಲೋಕ,ಸ್ವರ್ಗಲೋಕ ಬೇರಿಲ್ಲ ಕಾಣಿರೋ ಎಂದಿದ್ದಾರೆ. ಅಕ್ಕಮಹಾದೇವಿಯವರು ಶರಣರಿಗೆ ಇಹಪರವೆರಡೂ ಉಂಟು ಎಂಬುದೆ ಸತ್ಯ. ಈಗ ನಾವು ತೋರುವ ಜಗತ್ತಿನಲ್ಲಿ ಹುಟ್ಟಿ ಬಂದಿದ್ದೇವೆ. ಕೆಲವು ವರ್ಷ ಇಲ್ಲಿ ಇರುತ್ತೇವೆ. ಮತ್ತೆ ಇಲ್ಲಿಂದ ಹೊರಡುತ್ತೇವೆ. ಇಚ್ಛೆ ಇರಲಿ ಬಿಡಲಿ ನಾವು ಪೂರ್ಣರಾಗದಿದ್ದರೆ ಮತ್ತೆ ಹುಟ್ಟಿ ಬರುತ್ತೇವೆ. ಹುಟ್ಟಿಬರುವ ಜಗತ್ತು ಭವ ಅದು ಇಹ. ಹುಟ್ಟು ಆಚೆಗೆ ಏನಿದೆ ಅದು ಪರ. ಅದೆ ಮುಕ್ತಿ ಬಿಡುಗಡೆ.